


International Journal of Kannada Research
www.kannadajournal.com

**ISSN: 2454–5813**
IJSR 2016; 2(4): 40-42
© 2016 IJKS
www.kannadajournal.com
Received: 09-08-2016
Accepted: 10-09-2016

**ನವೀನ್ ಕುಮಾರ್ ವೈ.ಎನ್**
ಸಂಶೋಧನಾ ವಿದ್ಯಾರ್ಥಿ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ. ತುಮಕೂರು ವಿಶ್ವವಿದ್ಯಾನಿಲಯ. ತುಮಕೂರು

**ಡಾ. ಕೆ ಮಹಾಲಿಂಗಭಟ್**
ಸಹಪ್ರಾಧ್ಯಾಪಕರು. ಸೆಂಟ್ ಅಲೋಷಿಯಸ್ ಉನ್ನತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಮಂಗಳೂರು

**Correspondence**
**ಡಾ. ಕೆ ಮಹಾಲಿಂಗಭಟ್**
ಸಹಪ್ರಾಧ್ಯಾಪಕರು. ಸೆಂಟ್ ಅಲೋಷಿಯಸ್ ಉನ್ನತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಮಂಗಳೂರು

# ಹೊಸತಲೆಮಾರಿನ ಕಾವ್ಯ : ಅನುಸಂಧಾನದ ಭಿನ್ನ ನೆಲೆಗಳು’

**ನವೀನ್ ಕುಮಾರ್ ವೈ.ಎನ್, ಡಾ. ಕೆ ಮಹಾಲಿಂಗಭಟ್**

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾವ್ಯ ಪ್ರಕಾರ ತನ್ನದೇ ಆದ ಅನನ್ಯತೆಯನ್ನು ಕಂಡುಕೊಂಡಿದೆ. ಆಧುನಿಕ ಕನ್ನಡ ಸಾಹಿತ್ಯದ ಕಾವ್ಯ ಲೋಕವು ವಸ್ತು, ಧೋರಣೆ, ನಿಲುವು ಹಾಗೂ ಸಾಂಕೇತಿಕ ಅರ್ಥ ವ್ಯಾಖ್ಯೆಗಳ ಮುಖಾಂತರ ಸಮಾಜದಲ್ಲಿ ಅನೇಕ ಬದಲಾವಣೆಗಳನ್ನು ಉಂಟುಮಾಡುತ್ತಿದೆ. ಅದರಂತೆ ಆಧುನಿಕತೆ ರೂಪಿಸುತ್ತಿರುವ ಆಹ್ವಾನದ ಸವಾಲುಗಳನ್ನು ಕೆಳ ಸಮುದಾಯಗಳು ಉಪೇಕ್ಷೆಯಿಂದ ನಿರಾಕರಿಸಲು ಬರುವುದಿಲ್ಲ. ಇಂತಹ ಆಧುನಿಕತೆಯ ಸವಾಲುಗಳನ್ನು ಹಿಂದಿನ ಕಾವ್ಯ ತಲೆಮಾರುಗಳ ಮೂಲಕ ಸಾಕಷ್ಟು ಅರಿಯಬಹುದಾಗಿದೆ. ಅಲ್ಲದೆ ಹಿಂದಿನ ಕಾವ್ಯ ತಲೆಮಾರು ಹಲವಾರು ವಿಷಯಗಳನ್ನು ಈ ಹಿನ್ನೆಲೆಯಿಂದ ಸೃಷ್ಟಿಸಿಕೊಟ್ಟಿದೆ. ಅವರು ತಮ್ಮ ಅನುಭವ, ಅನುಭಾವಗಳೊಂದಿಗೆ ಕಾವ್ಯಗಳನ್ನು ನೈಜವಾಗಿ ಸೃಷ್ಟಿಸಿದ್ದಾರೆ. ಇದೇ ಹಾದಿಯಲ್ಲಿ ಹೊರಟು ಒಂದಿಷ್ಟು ಪಲ್ಲಟಗಳೊಂದಿಗೆ ಹೊಸತಲೆಮಾರಿನ ಕನ್ನಡ ಕಾವ್ಯವು ತೊಂಭತ್ತರ ದಶಕದ ನಂತರ ಜಾಗತೀಕರಣದೊಂದಿಗೆ ಮುಖಾಮುಖಿಯಾಗುತ್ತಾ, ಮರು ವ್ಯಾಖ್ಯಾನಕ್ಕೆ ಒಳಪಡುತ್ತಾ ತಮ್ಮ ದೈನಂದಿನ ತಲ್ಲಣಗಳನ್ನು ಕಣ್ಣಿಗೆ ಕಟ್ಟುವಂತೆ ರಚನೆಗೊಳ್ಳುತ್ತಿದೆ.

ಕನ್ನಡ ಸಾಹಿತ್ಯದ ಪರಿಪ್ರೇಕ್ಷ್ಯದಲ್ಲಿ ಇಪ್ಪತ್ತನೆಯ ಶತಮಾನದ ಕೊನೆಯ ಮತ್ತು ಇಪ್ಪತ್ತೊಂದನೇ ಶತಮಾನದ ಮೊದಲ ದಶಕಗಳ ಸಾಹಿತ್ಯ ಹೊಸ ಮಾದರಿಗಳ ಕಡೆಗೆ ಹೊರಳುತ್ತಿದ್ದು, ಭಿನ್ನ ಸ್ವರೂಪದ ಆಶಯಗಳನ್ನು ವ್ಯಕ್ತಪಡಿಸುತ್ತದೆ. ಈ ಪರಿಪ್ರೇಕ್ಷ್ಯದಲ್ಲಿ ಹೊಸತಲೆಮಾರಿನ ಸಾಹಿತ್ಯವು ಬಹಳ ತ್ವರಿತವಾಗಿ ಮತ್ತು ಜಾಗೃತವಾಗಿ ಮರುವಿನ್ಯಾಸಕ್ಕೆ ಒಳಗಾಗುತ್ತಿದೆ. ಈ ರೀತಿಯ ಮರುವಿನ್ಯಾಸಕ್ಕೊಳಪಡಲು ಕಾರಣ ಅಕ್ಷರ ವಂಚಿತ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳಿಗೆ ಶಿಕ್ಷಣ ದೊರೆತದ್ದು, ಆ ಸಮುದಾಯವನ್ನು ಪ್ರತಿನಿಧಿಸುತ್ತಿರುವ ಯುವ ಬರಹಗಾರರು ತೀರಾ ಭಿನ್ನ ಎನಿಸುವ ವಸ್ತುಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸುತ್ತಿರುವುದರ ಜೊತೆಗೆ ಸಾಮಾಜಿಕ ಜಾಲತಾಣಗಳು, ಅಂತರ್ಜಾಲ, ಎಲೆಕ್ಟ್ರಾನಿಕ್ ಮಾಧ್ಯಮಗಳು ಮುಂತಾದವುಗಳ ಮೂಲಕ ಜನಸಾಮಾನ್ಯರಿಗೆ ಭಿನ್ನ ಸಮುದಾಯಗಳ ತಲ್ಲಣಗಳ ಬಗ್ಗೆ ತಿಳಿಸುವ ಕೆಲಸ ನಡೆಯುತ್ತಿದೆ. ಅಲ್ಲದೆ ಸಾರ್ವಜನಿಕ ವಲಯಗಳಿಂದ ಹೊಸತಲೆಮಾರಿನ ಕವಿಗಳಿಗೆ ಸಿಗುತ್ತಿರುವ ಪ್ರೋತ್ಸಾಹ ಮತ್ತು ಸಮಾಜದಲ್ಲಿ ನಡೆಯುತ್ತಿರುವ ಕೇಡುಗಳು ಕವಿಗಳ ಸಾಮಾಜಿಕ ಕಳಕಳಿಯನ್ನು ಜಾಗೃತಗೊಳಿಸುತ್ತಿದೆ. ಹಾಗಾಗಿ ಈ ಮೂಲಕ ಹೊಸತಲೆಮಾರಿನ ಕಾವ್ಯಲೋಕ ತಮ್ಮ ಜೀವನಾನುಭವಗಳನ್ನು ಕಾವ್ಯಗಳ ಮುಖೇನ ಕಟ್ಟಿಕೊಡುತ್ತಿರುವುದನ್ನು ಕಾಣಬಹುದಾಗಿದೆ. ಅಷ್ಟೇ ಅಲ್ಲ ಹೊಸತಲೆಮಾರಿನ ಕಾವ್ಯ ಜಗತ್ತು ಇಂದು ಜಾತ್ಯತೀತ ವೈಚಾರಿಕ ಆಕ್ರೋಶದ ವಿನ್ಯಾಸದ ಆಚೆಗೆ ಹೊರಳುತ್ತಿದ್ದು ಮತ್ತು ತಮ್ಮ ಸಾಂಸ್ಕೃತಿಕ ಸ್ಮೃತಿ ಪರಂಪರೆಯನ್ನು ಅನುಸಂಧಾನ ಮಾಡುತ್ತಲೇ ಬಹಳ ದೊಡ್ಡ ಸಾಂಸ್ಕೃತಿಕ ಪಲ್ಲಟಗಳ ಕಡೆ ಮುಖ ಮಾಡುತ್ತಿದೆ.

ಈಗ ನಮ್ಮೆದುರಿಗೆ ಕಾಣುತ್ತಿರುವ ಕಾವ್ಯ ಮತ್ತು ಹೋರಾಟದ ಮಾದರಿಗಳು ಹೆಚ್ಚು ಸಬಾಲ್ಟ್ರನ್ ತಾತ್ವಿಕತೆಯನ್ನು ಪ್ರತಿಪಾದಿಸುವಂತೆ ಕಾಣುತ್ತಿವೆ. ಕಾರಣ ಇಂದು ಕಾವ್ಯ ರಚಿಸುತ್ತಿರುವ ಬರಹಗಾರರು ಅತ್ಯಂತ ಹಿಂದುಳಿದ ಸಮುದಾಯಗಳಿಂದ ಬಂದವರೇ ಆಗಿದ್ದು ತಮ್ಮ ಸಮುದಾಯಗಳ ದಯನೀಯ ಸ್ಥಿತಿಯ ಕಡೆ ಹೆಚ್ಚು ಬೆಳಕು ಚೆಲ್ಲುತ್ತಾ ಅಭಿವ್ಯಕ್ತಿಸುತ್ತಿದ್ದಾರೆ. ಹಾಗೆಂದು ಇಂತಹ ಥಿಯರಿಗಳನ್ನೇ ಈ ಕಾವ್ಯ ಮಾದರಿಗಳು ಉಸಿರಾಡುತ್ತಿವೆ ಎಂದು ಹೇಳುವುದೂ ಕಷ್ಟವೆ. ಆದರೆ ಕಲೆ ಮತ್ತು ಸಾಹಿತ್ಯಿಕ ಮೀಮಾಸೆಯ ಹೊಸ ಮಗ್ಗುಲುಗಳನ್ನಂತೂ ಹೊಸತಲೆಮಾರಿನ ಕನ್ನಡ ಕಾವ್ಯಲೋಕವು ಪರಿಚಯಿಸುತ್ತಿದೆ. ತೊಂಬತ್ತರ ದಶಕದ ನಂತರದ ಹೊಸ ಮಾದರಿಯ ಕಾವ್ಯ ತಲೆಮಾರು ಸಾಮಾನ್ಯವಾಗಿ ಪ್ರಜಾಪ್ರಭುತ್ವದ ವಿಸ್ತರಣೆ, ಹೊಸ ನಿಲುವು ಮತ್ತು ಈ ಗ್ರಹಿಕೆಗಳಲ್ಲಾದ ಸಂಕೀರ್ಣತೆಗಳನ್ನು ಒಳಗೊಂಡವುಗಳಾಗಿವೆ. ಕಲೆ ಮತ್ತು ಸಾಹಿತ್ಯ ರಾಜಕೀಯಾತ್ಮಕವಾಗುತ್ತಿರುವ ಈ

ಹೊಸ ಸಂದರ್ಭದಲ್ಲಿ ಕೇವಲ ಆಧುನಿಕ ವೈಚಾರಿಕವಾದದ ಆಶಯಗಳಿಗೆ ಮಾತ್ರ ಸೀಮಿತವಾಗದೆ ಇದು ಸಮುದಾಯ ಕೇಂದ್ರಿತ ಸ್ಮೃತಿಯ ಭಾವಕೋಶವನ್ನು ಸಹ ತನ್ನದಾಗಿಸಿಕೊಳ್ಳುತ್ತಿದೆ. ಈ ಮುಖಾಂತರ ಸಾಮಾಜಿಕ ಹೊಸ ನುಡಿಸಂಕರತೆ ಸಾಧ್ಯವಾಗುತ್ತಿದೆ. ಈ ವಿಧ್ಯಮಾನ ಈಗಾಗಲೇ ಇರುವ ಬೃಹತ್ ಸಂಕಥನಗಳನ್ನು ಅವುಗಳು ಇಟ್ಟುಕೊಂಡಿದ್ದ ಯಜಮೊನಿಯ ರಾಜಕಾರಣವನ್ನು ಬಯಲು ಮಾಡುತ್ತಿವೆ.

ಸಾಮಾಜಿಕವಾಗಿ ತೀರಾ ಕೆಳಗಿರುವ ಸಮುದಾಯಗಳ ಪದ ಪಲ್ಲವಿಯ ವಿನ್ಯಾಸಗಳು ಹೊಸರೂಪಕಗಳಾಗಿ ಆಧುನಿಕ ಸಾಹಿತ್ಯ ಮತ್ತು ಚೌಕಟ್ಟಿನೊಳಗೆ ಕಾಣಿಸಿಕೊಳ್ಳುತ್ತಿವೆ. ಎಪ್ಪತ್ತರ ದಶಕ ಈ ಪ್ರಕ್ರಿಯೆಗೆ ಅನುವು ಮಾಡಿಕೊಟ್ಟರೂ ಇದರ ಮರುವಿನ್ಯಾಸ ಈಗ ತೀವ್ರವಾಗುತ್ತಿರುವುದು ಹೊಸ ಸಾಮಾಜಿಕತೆಯ ಅನಿವಾರ್ಯತೆಯನ್ನು ಒತ್ತಿ ಹೇಳುತ್ತಿದೆ. ಎಲ್ಲರೂ ಮಾತನಾಡುವ ಕಾಲ ನಿರ್ಮಾಣವಾಗಿರುವ ಈ ಹೊತ್ತಲ್ಲಿ ತುಳಿತಕ್ಕೊಳಗಾದ ಸಮಾಜದ ಅಸ್ಮಿತೆಯನ್ನು ಸಾಂಸ್ಕೃತಿಕವಾಗಿ ಸೆಕ್ಯುಲರೈಜ್ ಮಾಡುವ ಸಾಧ್ಯತೆಯನ್ನು ಕಂಡುಕೊಳ್ಳಬೇಕಾಗಿದೆ. ಹಾಗಾಗಿ ತಮ್ಮೆದುರು ಇರುವ ಕಾವ್ಯಲೋಕ ಈ ಬಗೆಯ ವಿಶ್ವಾತ್ಮಕತೆಯನ್ನು ತಮ್ಮದೇ ಒಳನುಡಿಗಟ್ಟಿನ ಮೂಲಕ ರೂಪಿಸುವ ಇರಾದೆಯನ್ನು ಆತ್ಯಂತಿಕವಾಗಿ ಉಸಿರಾಡುತ್ತಿವೆ. ಈ ಬಗೆಯ ಒತ್ತಾಯಗಳು ಪ್ರಜಾಸತ್ತೆಯ ಹೊಸ ಸಾಂಸ್ಕೃತಿಕ ನಿರೂಪಣೆಯ ಅಗತ್ಯವನ್ನು ಮಂಡಿಸುತ್ತದೆ. ಈ ರೀತಿಯ ಅನುಭವ ಮತ್ತು ಅನುಭಾವಗಳನ್ನು ಹೊಸತಲೆಮಾರಿನ ಕಾವ್ಯ ಲೋಕದ ಕವಿಗಳು ತಮ್ಮ ಸಮಾಜದ ಸಮಾನತೆ ಮತ್ತು ಬದಲಾವಣೆಯ ವ್ಯವಸ್ಥೆಗೆ ಹಂಬಲಿಸಿದ್ದಾರೆ. ಇವುಗಳ ಮೂಲಕ ಸಮಾಜದಲ್ಲಿ ಉಂಟುಮಾಡಿರುವ ಬದಲಾವಣೆಗಳು ಅಪಾರ. ತನ್ನ ಸಂಕೀರ್ಣತೆಗೆ ವಿಷಯ ವೈವಿಧ್ಯತೆ, ವಸ್ತು, ತಂತ್ರ ವೈಶಿಷ್ಟ್ಯತೆ ಹಾಗೂ ಪ್ರತಿಮೆಗಳ ಜೊತೆಗೆ ಹನ್ನೆರಡನೇ ಶತಮಾನದ ವಚನಕಾರರಂತೆ ಇಂದಿನ ಹೊಸ ತಲೆಮಾರಿನ ಕವಿಗಳು ಭಾಷಾ ವೈವಿಧ್ಯತೆಯನ್ನು ಮೆರೆದಿದ್ದು ಜನಸಾಮಾನ್ಯನಾಡುವ ಭಾಷೆಯನ್ನಿಟ್ಟುಕೊಂಡು ಕಾವ್ಯ ರಚಿಸುವ ಮೂಲಕ ನುಡಿಸಂಕರದ ಕ್ರಾಂತಿಯೂ ಆದಂತಿದೆ. ಹಾಗೂ ಹೊಸತಲೆಮಾರು ಸೆಕ್ಯುಲರ್ ಜಗತ್ತನ್ನು ನಿರ್ಮಿಸುವ ಸಲುವಾಗಿ ಸಮಾಜದ ಪ್ರತಿಯೊಬ್ಬನ ಕಡೆಯೂ ಕಣ್ಣಾಡಿಸಿ ಜಗತ್ತಿನ ತಾಮಸ ಕಳೆಯನ್ನು ತೆಗೆದು ಹೊಸ ಕನಸಿನ ಹಾದಿಯಲ್ಲಿ ಸಾಗುವ ಹವಣಿಕೆಯಲ್ಲಿದೆ. ಹಾಗಾಗಿ ಹೊಸತಲೆಮಾರಿನ ಕಾವ್ಯ ಜಗತ್ತು ಬೇಗನೇ ಜನಪ್ರಿಯಗೊಳ್ಳುತ್ತಿದೆ.

ಪ್ರಸ್ತುತ ಕಾವ್ಯ ಪ್ರಕಾರದ ಸಾಹಿತ್ಯವು ಬರಹಗಾರರ ತೀಕ್ಷ್ಣ ಬರವಣಿಗೆಯೊಂದಿಗೆ ಸಮ್ಮಿಲನಗೊಂಡು ಸಮಾಜವನ್ನು ತನ್ನ ಎದುರಿಗಿರಿಸಿಕೊಂಡು ಹೊಸ ಹೊಸ ವಿಚಾರಗಳ ಕಡೆ ಕಣ್ಣಾಡಿಸುತ್ತ ವೈಚಾರಿಕತೆ, ತಾತ್ವಿಕ ನಿಲುವುಗಳು, ಸಮಕಾಲೀನ ಸಮಾಜದ ಸಂಕೀರ್ಣತೆ ಮತ್ತು ಬಿಕ್ಕಟ್ಟು, ಜೀವನದ ಮೌಲ್ಯವನ್ನು ತಿಳಿಸುವ ಪ್ರಯತ್ನವನ್ನು ನಡೆಸುತ್ತಿವೆ. ಕಾವ್ಯ ರಚನೆಯಲ್ಲಿ ಬರಹಗಾರರು ಬದುಕಿನ ಕೇರಿ, ಸಮುದಾಯ, ಸಮಾಜ, ಪ್ರಾದೇಶಿಕ, ಸಾಂಸ್ಕೃತಿಕ, ರಾಜಕೀಯ ಅಸ್ಮಿತೆಯ ಹುಡುಕಾಟದ ಆಯಾಮಗಳನ್ನು ಆಧುನಿಕತೆ ಮತ್ತು ಜಾಗತೀಕರಣಕ್ಕೆ ಮುಖಾಮುಖಿಯಾಗಿ ತಮ್ಮ ತುಮುಲಗಳನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಯಶಕಂಡಿವೆ.

ಹೊಸತಲೆಮಾರು ಎಂಬ ಪರಿಭಾಷೆಯು ತೊಂಬತ್ತನೇ ದಶಕದಿಂದೀಚೆಗೆ ಅಂದರೆ ಇಪ್ಪತ್ತನೇ ಶತಮಾನದ ಕೊನೆಯ ದಶಕದಿಂದೀಚೆಗೆ ಹೆಚ್ಚು ಪ್ರಚುರದಲ್ಲಿರುವುದನ್ನು ಕಾಣಬಹುದು. ಅದಕ್ಕೆ ಕಾರಣಗಳನ್ನು ಹುಡುಕಲು ಹೊರಟಾಗ ತೊಂಬತ್ತರ ದಶಕದಲ್ಲಾದ ಸ್ಥಿತ್ಯಂತರಗಳು ಮತ್ತು ಭಿನ್ನ ನೆಲೆಗಟ್ಟುಗಳು ಅನೇಕ ಯುವ ಬರಹಗಾರರನ್ನು ಆಕರ್ಷಿಸಿದುವು. ಈ ಎಲ್ಲಾ ಬರಹಗಾರರ ಚಿಂತನೆಯಿರುವುದು ತೊಂಬತ್ತರ ದಶಕದಿಂದೀಚೆಗಿನ ಪಲ್ಲಟಗಳು ಮತ್ತು ವಿಫಲತೆಗಳ ಕಡೆಯೇ ಆಗಿದೆ. ಅಲ್ಲದೆ ಆಧುನಿಕ ಕಾಲಘಟ್ಟ ಹಿಂದೆಂದಿಗಿಂತಲೂ ವಿಭಿನ್ನವಾದ ವಿನ್ಯಾಸವನ್ನು ಪಡೆದುಕೊಂಡಿದೆ. ಮಾರುಕಟ್ಟೆ ಸಂಸ್ಕೃತಿಯಿಂದಾಗಿ ಜನಜೀವನ ಸಾಕಷ್ಟು ಸಂಕೀರ್ಣಗೊಂಡು ಅನೇಕ ಬಗೆಯಲ್ಲಿ ಸ್ಥಿತ್ಯಂತರಗೊಂಡಿದೆ. ಕೃಷಿ, ಕೈಗಾರಿಕೆ, ಶಿಕ್ಷಣ, ಸಾರಿಗೆ ಮುಂತಾದ ಕ್ಷೇತ್ರಗಳು ಸ್ವಂತಿಕೆಯನ್ನು ಕಳೆದುಕೊಂಡು ಪರಾವಲಂಬಿಯಾಗಿ ಗುರುತಿಸಲು ಅಸಾಧ್ಯವಾಗುವಷ್ಟು ಜನಜೀವನದ ಬಿಕ್ಕಟ್ಟುಗಳಿಂದ ನೈತಿಕ ಅಧಃಪತನಕ್ಕೀಡಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕನ್ನಡದ ಕಾವ್ಯ ತಲೆಮಾರು ಹೊಸ ಸಂವೇದನೆಗಳೊಂದಿಗೆ ಆಲೋಚಿಸುತ್ತಿದ್ದು ಬದಲಾಗುತ್ತಿರುವ ಬದುಕಿನ ಬಿಕ್ಕಟ್ಟುಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡುತ್ತಿದೆ.

ತೊಂಬತ್ತರ ದಶಕದ ನಂತರದ ಕಾಲಘಟ್ಟವು (ಅಂದರೆ ಇಪ್ಪತ್ತೊಂದನೇ ಶತಮಾನದ ಮೊದಲ ದಶಕ) ಸಾಹಿತ್ಯದ ಯಾವ ಸೈದ್ಧಾಂತಿಕ, ಪಾಂಥಿಕ ಚಳವಳಿಗಳ ಮಾದರಿಯಿಲ್ಲದೆ ಹೊಸ ಆಶಾವಾದದೊಂದಿಗೆ ಬೆಳೆಯುತ್ತಿರುವುದನ್ನು ಕಾಣಬಹುದು. ಅಂದರೆ ಸಮಕಾಲೀನ ಸಾಹಿತ್ಯಕ ಸಂದರ್ಭವು ಸಾಹಿತ್ಯಕ ನೆಲೆಯ ಪಾಂಥಿಕ ಚಳವಳಿಗಳಿಂದ ಬಿಡುಗಡೆಗೊಂಡು ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸ್ಮಿತೆಯನ್ನು ಕಾವ್ಯಜಗತ್ತಿನ ಮುಖೇನ ಹುಡುಕಲು ಪ್ರಯತ್ನಿಸಿದ ಕಾಲವಿದು. ಈ ಕಾರಣದಿಂದ ತೊಂಬತ್ತರ ದಶಕ ಮತ್ತು ನಂತರದ ಸಾಹಿತ್ಯಕ ಸಂದರ್ಭದ ವಾತಾವರಣವು ಹೆಚ್ಚಿನ ಪ್ರಮಾಣದಲ್ಲಿ ಪ್ರಜಾತಾಂತ್ರಿಕಗೊಳ್ಳುತ್ತಿದೆ. ಇಲ್ಲಿ ಪ್ರತಿಯೊಬ್ಬ ಕವಿಯೂ ಕೂಡ ಸಮಾಜದ ವಾಸ್ತವ ಸ್ಥಿತಿಗತಿಯನ್ನು ಮತ್ತು ಸಮಾಜದಲ್ಲಿ ನಡೆಯುವ ಹುನ್ನಾರಗಳನ್ನು ಬಿಡಿಬಿಡಿಯಾಗಿ ತೆರೆದಿಟ್ಟು ನವಸಮಾಜವನ್ನು ನಿರ್ಮಿಸುವ ಹವಣಿಕೆಯಲ್ಲಿ ತೊಡಗಿದ್ದಾನೆ. ಅಲ್ಲದೆ ಸಮಾಜದಿಂದ ತಿರಸ್ಕಾರಕ್ಕೊಳಗಾದ ಸಮುದಾಯದ ದನಿಯಾಗಿ, ಅವರ ಅಸ್ಮಿತೆಯನ್ನು ಹುಡುಕುವ ಪ್ರಯತ್ನವನ್ನು ಕವಿ ಕಾವ್ಯಗಳ ಮುಖೇನ ಮಾಡುತ್ತಿದ್ದಾನೆ.

ಈ ಹಿಂದಿನ ಕಾವ್ಯ ತಲೆಮಾರುಗಳ ಆಶಯಗಳನ್ನಿಟ್ಟುಕೊಂಡೇ ಕಾವ್ಯ ರಚಿಸಿದ ತೊಂಬತ್ತರ ದಶಕ ಮತ್ತು ಆ ನಂತರದ ದಶಕದಲ್ಲಿನ ಹೊಸತಲೆಮಾರಿನ ಕವಿಗಳು ಹಿಂದಿನ ಕಾವ್ಯತಲೆಮಾರುಗಳ ಆಶಯಗಳಿಂದ ಬಿಡುಗಡೆಗೊಂಡು ಹಿಂದಿನ ಚಳವಳಿಗಿಂತ ಭಿನ್ನವಾಗಿ ಚಿಂತಿಸುತ್ತ ಕೇವಲ ಅರಚಾಟ–ಕಿರುಚಾಟಗಳಿಂದ ನ್ಯಾಯದೊರಕಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಹಿಂದಿನ ಕಾವ್ಯ ಸ್ವರೂಪಕ್ಕೆ ಬದಲಾಗಿ ಹೊಸ ಆಕಾಂಕ್ಷೆಯ ಕನಸುಗಳು ಕಾವ್ಯದಲ್ಲಿ ಅಭಿವ್ಯಕ್ತಿಗೊಳ್ಳುತ್ತಿವೆ. ದಲಿತ – ಬಂಡಾಯ ಚಳವಳಿಯ ಕಾವ್ಯ ತತ್ವಗಳ ಮಿತಿಗಳನ್ನು ಮೀರಿ ಹೊಸ ಆಕಾಂಕ್ಷೆಯ ಜೊತೆಗೆ ನವೀನ ಮಾದರಿಯ ಜ್ಞಾನ ಮತ್ತು ವಿವೇಕದ ಲೋಕದೃಷ್ಟಿಗಳನ್ನು ಹುಡುಕುವ ಹಂಬಲಗಳು, ಮತ್ತದರ ಬಿಕ್ಕಟ್ಟುಗಳಿಂದ ಬಿಡುಗಡೆ ಹೊಂದುವುದರ ಬಗ್ಗೆ ಕಾವ್ಯ ಜಗತ್ತಿನ ಚಿಂತನೆ ಮರುವಿನ್ಯಾಸ ಪಡೆಯುತ್ತಿದೆ ಎಂಬ ಆಶಯಗಳ ತಳಹದಿಯನ್ನು ಮುಕ್ತವಾಗಿ ಹೊಳಹೊಕ್ಕು ನೋಡಬೇಕಾಗಿದೆ.

ಆಧುನಿಕ ಪಲ್ಲಟಗಳಿಗೆ ಒಳಗಾದ ನಗರ ಮತ್ತು ಗ್ರಾಮೀಣ ಬದುಕಿನ ಜೀವನವನ್ನು ನೂತನ ಪರಿಭಾಷೆಯಲ್ಲಿ ಅರ್ಥೈಸುವ, ಅನ್ವೇಷಿಸುವ ಹೊಣೆಗಾರಿಕೆಯನ್ನು ಹೊಸತಲೆಮಾರಿನ ಕಾವ್ಯ ಲೋಕ ಸ್ವೀಕರಿಸಿದೆ. ಭಗ್ನಗೊಂಡ ಪ್ರಜಾಪ್ರಭುತ್ವ ಮೌಲ್ಯಗಳ ಸಾಧ್ಯತೆ ಮತ್ತು ಸವಾಲುಗಳನ್ನು ಜೀವನ ಕ್ರಿಯೆಯಲ್ಲಿ ನೈತಿಕವಾಗಿ ಶೋಧಿಸುವ ಪ್ರಯತ್ನವು ಇಂದಿನ ಕಾವ್ಯ ಜಗತ್ತಿನಲ್ಲಿ ಕಾಣಸಿಗುತ್ತಿದೆ. ಸಮುದಾಯ ಸಂಬಂಧಗಳಲ್ಲಿ ಕಾಣಿಸಿಕೊಂಡ ಬಕ್ಕಟ್ಟುಗಳನ್ನು ಹೆಣೆಯುವ ತಾತ್ವಿಕ ದೃಷ್ಟಿಕೋನ – ರಚನೆ, ವಿನ್ಯಾಸ, ಆಕೃತಿ ಆಶಯಗಳಲ್ಲಿ ಅಭಿವ್ಯಕ್ತಿಯಾಗುತ್ತಿದೆ. ಇದು ಬಹುಮುಖ್ಯವಾದ ಬೆಳವಣಿಗೆ. ಹಲವು

ಸಮುದಾಯಗಳು ನಿರೂಪಿಸುವ ಹಾದಿಯನ್ನು ಸ್ವಮೂಲದ ಭಾಷಿಕ ನೆಲೆಯಲ್ಲಿ ಕಂಡಕೊಳ್ಳುತ್ತಿವೆ. ಇದರಿಂದಾಗಿ ಆಕೃತಿ, ಆಶಯ, ಭಾಷೆ, ಶೈಲಿಗಳಲ್ಲಿ ಪಲ್ಲಟಗಳು ಕಾಣಿಸಿಕೊಂಡಿವೆ. ಈ ಕಾಣುವಿಕೆಯ ಚಾರಿತ್ರಿಕ, ಸಾಂಸ್ಕೃತಿಕ ಸಂಗತಿಗಳು ಇಂದಿನ ಕಾವ್ಯ ಜಗತ್ತಿನಲ್ಲಿ ಹೆಚ್ಚು-ಹೆಚ್ಚು ಶೋಧಿತವಾಗುತ್ತಿವೆ. ಅಲ್ಲದೆ ದೇಸೀ ಮತ್ತು ಶಿಷ್ಟ ನೆಲೆಗಳು ತೊಂಬತ್ತು ಮತ್ತು ನಂತರದ ದಶಕದ ಕಾವ್ಯಗಳ ಜೀವಾಳ. ಕಾರಣ ಈ ಸಂದರ್ಭದಲ್ಲಿ ರಚನೆಯಾದ ಕಾವ್ಯಗಳು ಗ್ರಾಮೀಣ ಮತ್ತು ನಗರಗಳಲ್ಲಿ ವಾಸಿಸುವ ಜನರಿಂದಲೇ ರಚಿತವಾಗಿದ್ದು, ಇವು ಆಯಾ ಜನರ ಮಣ್ಣಿನ ಸೊಗಡಿನಿಂದ ಬಂದವುಗಳೇ ಆಗಿವೆ.

ತೊಂಬತ್ತರ ದಶಕದಲ್ಲಿ ಬರೆಯ ಹೊರಟ ಹೊಸ ತಲೆಮಾರಿನ ಕವಿಗಳು ತಮ್ಮ ಬರಹಗಳಲ್ಲಿ ವಿಭಿನ್ನ ಚಿಂತನೆಗಳನ್ನು ನಿರ್ವಚಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಸಮಕಾಲೀನ ಬಿಕ್ಕಟ್ಟುಗಳು ಮನುಷ್ಯನನ್ನು ತುಂಬಾ ಸಂಕುಚಿತಗೊಳಿಸುತ್ತಿದ್ದು ಈ ನಿಟ್ಟಿನಲ್ಲಿ ಯೋಚಿಸಲು ಹೊರಟಾಗ ವಿವಿಧ ನೆಲೆಗಳ ಗ್ರಹಿಕೆಯ ಅಗತ್ಯವನ್ನು ಅಪೇಕ್ಷಿಸುತ್ತಿದೆ. ಹಾಗೆಯೇ ಈ ಹೊಸತಲೆಮಾರಿನ ಸಾಹಿತ್ಯ ಭಿನ್ನ ಆಶೋತ್ತರವನ್ನು ಕೂಡ ವ್ಯಕ್ತಪಡಿಸುತ್ತಿದೆಯೇ? ಎಂದು ಕೇಳಿಕೊಳ್ಳಬೇಕಾಗಿದೆ. ಹಾಗಾಗಿ ಇಂಡಿಯಾದ ಸಂದರ್ಭದಲ್ಲಿ ಸಾಹಿತ್ಯ ಎನ್ನುವುದು ಹೊಸ ಸಾಮಾಜಿಕ ಗ್ರಹಿಕೆಗಳ ಪುನರ್ ಸೃಷ್ಟಿಯಾಗಿರುತ್ತದೆ. ಈ ಸೃಷ್ಟಿ ಎಂಬುದು ವ್ಯಕ್ತಿ ಮತ್ತು ಸಮಾಜದ ನಿಂತ ನೆಲೆಗಳ ಆಚೆಗೆ ಕೊಂಡೊಯ್ಯುವ ಸಾಂಸ್ಕೃತಿಕ ಚಲನಶೀಲತೆ ಆಗಿರುತ್ತದೆ. ಹೊಸತಲೆಮಾರಿನ ಕಾವ್ಯ ಜಗತ್ತು ನವೋದಯ ಸಂದರ್ಭದಲ್ಲಿ ವ್ಯಕ್ತವಾಗುವಂತೆ ಪ್ರಾಕೃತಿಕ ಸೊಬಗಿನ ಬಗ್ಗೆ ಬೆಳಕು ಚೆಲ್ಲುತ್ತಾದರೂ ನವೋದಯದ ಆಶಯಕ್ಕಿಂತ ತೀರಾ ಭಿನ್ನ. ಪ್ರಕೃತಿ ಆರಾಧನೆಗಿಂತ ಪ್ರಾಕೃತಿಕ ಸಂಪತ್ತು ಇಂದು ನಶಿಸುತ್ತಿರುವುದರ ಬಗ್ಗೆ, ಆಧುನೀಕರಣದ ವಿಕಾರ – ವಿಕೋಪಗಳ ಬಗ್ಗೆ ಬೆಳಕು ಚೆಲ್ಲುತ್ತದೆ. 'ರೊಮ್ಯಾಂಟಿಸಂ'ಗೆ ಬದಲಾಗಿ ಪ್ರಕೃತಿಯ 'ರಿಯಲಸ್ಟಿಕ್' ಕಡೆ ಗಮನ ಹರಿಸುವವರಾಗಿದ್ದಾರೆ. ಪ್ರಕೃತಿಯನ್ನು ವಿನಾಶಗೊಳಿಸಿ ಕಾಡು – ಪ್ರಾಣಿ – ಮನುಷ್ಯರ ನಡುವಿನ ತಿಕ್ಕಾಟಗಳಿಗೆ ಕಾರಣವಾಗಿರುವ ಮಾನವನ ದುಷ್ಟತನವನ್ನು ಕಾವ್ಯಗಳ ಮುಖೇನ ನೇರವಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ.

ಪ್ರಸ್ತುತ ಸಂದರ್ಭವು ಅನೇಕ ಸವಾಲುಗಳನ್ನು ಎದುರಿದುತ್ತಿದ್ದು ಅದರಲ್ಲಿ ಪ್ರಮುಖವಾಗಿ ಕೋಮುವಾದದ ಸಮಸ್ಯೆಯೂ ಒಂದು ಚರ್ಚಿತ ವಿಷಯವಾಗಿದೆ. ಧಾರ್ಮಿಕ ಸಂಘ ಸಂಸ್ಥೆಗಳಿಂದ, ಮತ ಮಾನ್ಯಗಳಿಂದ, ನೈತಿಕ ಪೋಲೀಸ್‌ಗಿರಿತನದಿಂದ ಇಂದು ಮನುಷ್ಯ ಸಂಬಂಧಗಳ ಹಳಸುವಿಕೆ ಹೆಚ್ಚಾಗುತ್ತಿದೆ. ಇಂತಹ ಕ್ರೌರ್ಯಗಳ ಬಿಕ್ಕಟ್ಟನ್ನು ಸೃಷ್ಟಿಸಿರುವ ಪಿತೃಗಳು ನಮಗೆ ಚರಿತ್ರೆಯಿಂದಲೂ ಕಾಣಸಿಗುತ್ತಾರೆ. ಇದರ ಟಿಸಿಲುಗಳೇ ಮೂಲಭೂತವಾದ, ಜನಾಂಗಿಕವಾದ ಮತ್ತು ಕೋಮುವಾದಗಳು. ಇವೆಲ್ಲವುಗಳಿಂದ ಇಂದಿನ ಬಿಕ್ಕಟ್ಟುಗಳು ಬಿಡಿಸಲಾಗದ ಕಗ್ಗಂಟಾಗಿ ಪರಿಣಮಿಸಿವೆ. ಇಂತಹ ಸಮಸ್ಯೆಗಳ ಬಗ್ಗೆ ಹೊಸತಲೆಮಾರಿನ ಕಾವ್ಯಗಳಲ್ಲಿ ಕಾಣಬಹುದು. ಇಂದಿನ ಜ್ಞಾನಯುಗವು ತಲ್ಲಣಗಳನ್ನು ಸೃಷ್ಟಿಸುತ್ತಿದ್ದು ಇದರ ಫಲವಾಗಿ ವಿಜ್ಞಾನ ಮೀಮಾಂಸೆಯ ಅತಿರೇಕಗಳು ಮನುಷ್ಯನ ಮನಸ್ಸುಗಳಿಗೆ ಲಗ್ಗೆ ಹಾಕಿವೆ. ಇಂದಿನ ವಿಜ್ಞಾನ ಮೀಮಾಂಸೆಯು ಮುಂದುವರೆದಂತೆಲ್ಲಾ ಮನುಷ್ಯ ಯಾಂತ್ರಿಕ ಬದುಕಿನ ಕಡೆ ಮುಖ ಮಾಡುತ್ತಿದ್ದಾನೆ. ಒಂಟಿತನ ಅವನನ್ನು ಕಾಡುತ್ತಿದೆ. ಮತ್ತೆ ಗ್ರಾಮೀಣ ಸಮುದಾಯದ ಹುಡುಕಾಟ, ಅಲ್ಲಿನ ಪರಿಸರ, ಬದುಕು ನಡೆಸುವ ಹೊಣೆಗಾರಿಕೆಯ ಹುಡುಕಾಟವು ಹೊಸತಲೆಮಾರಿನ ಕಾವ್ಯಗಳಲ್ಲಿ ಹೆಚ್ಚಾಗಿ ಗೋಚರಿಸುತ್ತಿದೆ.

ಒಟ್ಟಾರೆ ಹೊಸತಲೆಮಾರಿನ ಕಾವ್ಯಗಳಲ್ಲಿ ಬಹುಮುಖ್ಯ ವಿಷಯಗಳು ಚಿಂತನೆಗಳಿಗೆ ಒಳಗಾಗಿದ್ದು, ಬುದ್ಧ, ಬಸವ, ಕನಕ, ಗಾಂಧಿ, ಅಂಬೇಡ್ಕರ್, ಪೆರಿಯಾರ್, ಲೋಹಿಯಾ ಮುಂತಾದವರು ಕಂಡಂತ ಸರ್ವ ಸಮಾನತೆಯ ಆಶಯವನ್ನು ಇಂದಿನ ಯುವ ತಲೆಮಾರಿನ ಕಾವ್ಯಲೋಕ ಸಾಕಾರಗೊಳಿಸಲು ಪ್ರಯತ್ನಿಸಿರುವುಂತೂ ಸ್ಪಷ್ಟ. ವರ್ತಮಾನದ ಅನೇಕ ತಲ್ಲಣಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿರ್ವಚನಗೊಳ್ಳದೆ ಹಾಗೇ ಉಳಿದಿದ್ದು ಇವು ತಾತ್ವಿಕ ಸಮಸ್ಯೆಗಳಾಗಿಯೇ ಉಳಿದಿವೆ. ಅದರೂ ಸಮಾನತೆ ಮತ್ತು ಪ್ರಗತಿ ಎಂಬ ಆಶಯಗಳನ್ನು ಕೈ ಬಿಡದೆ ಯಾವುದೋ ನೆಲದಿಂದ ಎರವಲಾಗಿ ಪಡೆದ ವೈಚಾರಿಕ ಆಶಯಗಳನ್ನು ಅನುಸರಿಸದೆ ಅನಾಥ ಪ್ರಜ್ಞೆಯನ್ನು ಮೀರಿ ದೇಸೀ ತತ್ವದಿಂದಲೇ ಎಲ್ಲಾ ಆಶಯಗಳನ್ನು ಕಟ್ಟುವ ಆತ್ಮವಿಶ್ವಾಸ ಇಂದಿನ ಕಾವ್ಯಜಗತ್ತಿನಲ್ಲಿರುವುದನ್ನು ಕಾಣಬಹುದು.

**ಪರಾಮರ್ಶನ ಕೃತಿಗಳು**


೧. ಹೊಸ ತಲೆಮಾರಿನ ತಲ್ಲಣ – ಡಾ.ರಹಮತ್ ತರೀಕೆರೆ, ಪ್ರಸಾರಾಂಗ ಹಂಪಿ ವಿ.ವಿ, ಹಂಪಿ.

೨. ಕಾವ್ಯ ಪ್ರೀತಿ – ಟಿ.ಪಿ.ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

೩. ಆಫ್ರಿಕನ್ ಮತ್ತು ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಪರಂಪರೆ–ಡಾ.ನಟರಾಜ್ ಹುಳಿಯಾರ್, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೪. ಜನಭಾಷೆ ಮತ್ತು ಪ್ರಭುತ್ವಭಾಷೆಗಳ ಸಂಘರ್ಷ–ಡಾ.ರಂಗನಾಥ್ ಕಂಟನಕುಂಟೆ, ಕೆ.ಎಸ್.ಮುದ್ದಣ್ಣ ಸ್ಮಾರಕ ಟ್ರಸ್ಟ್ – ಕೃಷ್ಣಾಪುರದೊಡ್ಡಿ.

೫. ಮುಸ್ಲಿಂ ಮಹಿಳಾ ಸಂವೇದನೆ–ಡಾ.ಷರೀಫಾ ಕೆ, ಅಂಕಿತ ಪ್ರಕಾಶನ, ಬೆಂಗಳೂರು.

೬. ಮಹಿಳೆ : ಅಸ್ಥಿತ್ವದ ಸಂಕಥನ – ಡಾ.ಕವಿತಾ ರೈ. ಪ್ರಗತಿ ಪ್ರಿಂಟರ್ಸ್, ಬೆಂಗಳೂರು.

೭. ನಿಲ ವರ್ತಮಾನದ ಮುಖಾಮುಖಿ – ಡಾ.ಬಂಜಗೆರೆ ಜಯಪ್ರಕಾಶ್. ಹೊನ್ನಾರು ಪ್ರಕಾಶನ, ತಿಪಟೂರು.